# Varsities undecided on final year exams

## Several States, universities say they were not consulted before the decision was taken

SPECIAL CORRESPONDENT
NEW DELHI

Fewer than half of the country's universities say they are prepared to conduct final year examinations as directed by the University Grants Commission (UGC). The rest are undecided or yet to inform the UGC of their decision, 10 days after the guidelines were issued, according to data from the regulator.

"Universities were approached to inform the status of the conduct of examination," the UGC said in a statement on Thursday. Out of 993 universities, 182 have informed the UGC that they have already conducted the examination, while another 272 plan to do so. Another 177 universities have informed the regulator that they are yet to decide on the conduct of the examination. There are no final year students in 27 private universities which were only established last year. The remaining universities are yet to respond.



**Raised voices:** Members of the West Bengal State Chhatra Parishad staging a protest against the UGC in Kolkata earlier this month. •PTI

At least five non-BJP State governments have announced that their universities will not conduct examinations due to the COVID-19 pandemic, in defiance of the guidelines. Only 251 out of 412 State universities have responded so far.

### 'Guidelines still stand'

"After issuing the guidelines, we are now understanding the readiness and status of implementation for examinations to be conducted by the end of September. The guidelines still stand," UGC member secretary Rajnish Jain told *The Hindu* when asked why this kind of feedback had not been sought from universities before the guidelines were issued.

Several State governments and universities have said they were not consulted before the decision was taken.

# ಸೋಂಕಿತರ ಚಿಕಿತ್ಸೆಗೆ ನಿರ್ಲಕ್ಷ್ಯ ತೋರಿಲ್ಲ

■ ವಿಜಯವಾಣಿ ಸುದ್ದಿಜಾಲ ಕೋಲಾರ

» **ಉಪ ಕುಲಪತಿ ಡಾ.ಪ್ರದೀಪ್ ಕುಮಾರ್ ಸ್ಪಷ್ಟನೆ**

ಕರೊನಾ ಸೋಂಕಿತರೊಂದಿಗೆ ಸಂಪರ್ಕ ಹೊಂದಿರುವವರನ್ನು ಕ್ವಾರಂಟೈನ್ ಮಾಡಲು ಸ್ಥಳಾವಕಾಶ ಇಲ್ಲ ಎಂದು ಹೇಳಿದ್ದರಿಂದ ನಮ್ಮ ಆಸ್ಪತ್ರೆ ಮೇಲೆ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದ್ದು ಜಿಲ್ಲಾ ಆಡಳಿತ ಮತ್ತು ಆರೋಗ್ಯ ಇಲಾಖೆ ಮುಖ್ಯಸ್ಥರಿಗೆ ವಾಸ್ತವಾಂಶ ತಿಳಿಸಲಾಗಿದೆ ಎಂದು ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಉಪ ಕುಲಪತಿ ಡಾ.ಪ್ರದೀಪ್‌ಕುಮಾರ್ ಸ್ಪಷ್ಟಪಡಿಸಿದರು.

ಕಾಲೇಜಿನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡಲು ವಿಶೇಷ ವಾರ್ಡ್ ತೆರೆಯಲಾಗಿದೆ. ಕೋಲಾರ ಮಾತ್ರವಲ್ಲದೆ ಬೇರೆ ಜಿಲ್ಲೆಗಳಿಂದ ಸೋಂಕಿತರು ದಾಖಲಾಗುತ್ತಿದ್ದಾರೆ. ಸೋಂಕಿತರನ್ನು ಸಂಪರ್ಕಿಸಿರುವವರಿಗೆಲ್ಲಾ ಕ್ವಾರಂಟೈನ್ ಮಾಡುವಷ್ಟು ಬೆಡ್ ವ್ಯವಸ್ಥೆ ಇಲ್ಲವಾದ್ದರಿಂದ ಸೋಂಕಿತರನ್ನು ಮಾತ್ರ ದಾಖಲಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ



ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಉಪ ಕುಲಪತಿ ಡಾ.ಪ್ರದೀಪ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರೊ.ಎಂ.ಡಿ. ಪ್ರಸನ್ನ ಕಾಮತ್, ಡಾ. ಸುನೀಲ್ ಕುಮಾರ್ ಇದ್ದರು.

ಎಂದರು. ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದವರೆಲ್ಲವೂ ಕರೊನಾದಿಂದಲೇ ಮೃತಪಟ್ಟಿಲ್ಲ, 10 ಮಂದಿ ಬೇರೆ ಬೇರೆ ಕಾರಣದಿಂದ ಸತ್ತಿದ್ದು, ಆ ನಂತರ ಇವರಲ್ಲಿ ಕೆಲವರಿಗೆ ಸೋಂಕು ದೃಢಪಟ್ಟಿದೆ. ಆದರೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಇಲ್ಲದೆ ನಿರ್ಲಕ್ಷ್ಯ ತೋರಿದ್ದಾರೆಂಬುದು ಆಧಾರ ರಹಿತ ಆರೋಪ ಎಂದು ವಿವರಿಸಿದರು. ಶ್ವಾಸಕೋಶ ಮತ್ತು ಉಸಿರಾಟದ ತೊಂದರೆಗಳಿಂದ ಕೆಲವರು ಸತ್ತಿದ್ದಾರೆ. ಆದರೆ ಕರೊನಾದಿಂದ ಸತ್ತಿರುವುದಾಗಿ ಬಿಂಬಿಸಲಾಗುತ್ತಿದೆ. ಕಳೆದ 4 ತಿಂಗಳಿಂದ ಕರೊನಾ ಪೀಡಿತರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈವರೆಗೆ 476 ಜನರು ದಾಖಲಾಗಿದ್ದು, 153 ಮಂದಿಯಲ್ಲಿ ಪಾಸಿಟಿವ್ ದೃಢಪಟ್ಟಿದೆ, 119 ಸಕ್ರಿಯ ಪ್ರಕರಣಗಳಿದ್ದು, 17 ಮಂದಿ ಗುಣವಾಗಿದ್ದಾರೆ ಎಂದು ವಿವರಿಸಿದರು. ಸಂಸ್ಥೆಯು ಬಡ ರೋಗಿಗಳ ಸೇವೆಗೆ ಬದ್ಧವಾಗಿದೆ. ಸರ್ಕಾರದ ನಿಯಮಾನುಸಾರ ಕೆಲಸ ಕಾರ್ಯ ನಡೆಯುತ್ತಿದೆ. ಕರೊನಾ ವಿಚಾರದಲ್ಲಿ ನಮ್ಮಿಂದ ಯಾವುದೇ ತಪ್ಪು ಆಗಿಲ್ಲ, ಜಿಲ್ಲಾಧಿಕಾರಿಗಳ ನೋಟಿಸ್‌ಗೆ ಉತ್ತರ ನೀಡಿದ್ದೇವೆ ಎಂದು ಸಮರ್ಥನೆ ಮಾಡಿಕೊಂಡರು.

ಆಸ್ಪತ್ರೆ ಅಧೀಕ್ಷಕ ಡಾ.ಅಜೀಂ ಮೊಯ್ದೀನ್ ಮಾತನಾಡಿ, ಕರೊನಾ ಪರೀಕ್ಷೆಗಾಗಿ 4500 ರೂ. ಶುಲ್ಕ ನಿಗದಿ ಮಾಡಲಾಗಿದೆ, ಜಿಲ್ಲಾ ಮತ್ತು ತಾಲೂಕು ಸರ್ಕಾರಿ ಆಸ್ಪತ್ರೆಗಳಿಂದ ಕಳುಹಿಸುವ ಪ್ರಕರಣಕ್ಕೆ ತಪಾಸಣೆ ಮಾಡಲು 2500 ರೂ. ಪಡೆಯಲಾಗುವುದು, ಒಂದು ವೇಳೆ ವಿಮಾ ಸೌಲಭ್ಯವಿರುವವರು ನಗದು ರಹಿತ ಸೇವೆ ಪಡೆಯಲು ಅವಕಾಶವಿದೆ ಎಂದರು. ವೆಂಟಿಲೇಟರ್‌ಗೆ 8000 ರೂ, ಐಸಿಯು ಬೆಡ್‌ಗೆ 4000 ರೂ., ಸಾಮಾನ್ಯ ವಾರ್ಡಿಗೆ 3 ದಿನಕ್ಕೆ 2500 ರೂ. ಶುಲ್ಕ ವಿಧಿಸಲಾಗುವುದು ಎಂದರು.

ಉದಯವಾಣಿ



# ಕೊರೊನಾ ವಾರ್ಡ್‌ಗೆ ಬಂದು ಪರಿಶೀಲಿಸಿ

## ಸರಿಯಾಗಿ ಚಿಕಿತ್ಸೆ ನೀಡುತ್ತಿಲ್ಲ ಆರೋಪಕ್ಕೆ ಜಾಲಪ್ಪ ಆಸ್ಪತ್ರೆ ಉತ್ತರ

**ಕೋಲಾರ:** ಜಾಲಪ್ಪ ಆಸ್ಪತ್ರೆಯಲ್ಲಿ ಕೋವಿಡ್-19 ಸೋಂಕಿತರಿಗೆ, ಸರಿಯಾಗಿ ಚಿಕಿತ್ಸೆ, ಪರೀಕ್ಷೆ ಹಾಗೂ ಉಪಚಾರ ಮಾಡುತ್ತಿಲ್ಲ ಎಂದು ಆರೋಪಿಸುವವರು ವಾರ್ಡ್‌ಗೆ ಬಂದು ಪರಿಶೀಲಿಸಲಿ ಎಂದು ಆರ್.ಎಲ್. ಜಾಲಪ್ಪ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವೈಸ್ ಚೇರ್ಮನ್ ಡಾ.ಜಿ.ಪ್ರದೀಪ್ ಕುಮಾರ್ ಹೇಳಿದರು.

ನಗರ ಹೊರವಲಯದಲ್ಲಿರುವ ಆಸ್ಪತ್ರೆ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಚಿಕಿತ್ಸೆಗೆ ಸ್ಪಂದಿಸುವ ಕೊರೊನಾ ಸೋಂಕಿತರನ್ನು ತಮ್ಮ ಬಳಿ ಇಟ್ಟುಕೊಂಡು, ಆತಂಕದ ಸ್ಥಿತಿಯಲ್ಲಿ ಇರುವವರನ್ನು ಜಿಲ್ಲಾಸ್ಪತ್ರೆಯವರು ಜಾಲಪ್ಪ ಆಸ್ಪತ್ರೆಗೆ ಕಳಿಸುತ್ತಾರೆ. ಅಂತಹ ರೋಗಿಗಳು ಸರಿಯಾಗಿ ಔಷಧೋಪಚಾರಕ್ಕೆ ಸ್ಪಂದನೆ ನೀಡದೇ ಸಾವನ್ನಪ್ಪಿದ್ದಾರೆ. ಆದರೆ, ಇಲ್ಲಿ ಚಿಕಿತ್ಸೆ ಪರೀಕ್ಷೆ ಉತ್ತಮವಾಗಿ ಮಾಡುತ್ತಿಲ್ಲ ಎಂದು ಆರೋಪಿಸುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸೋಂಕಿತರಿಗೆ ಚಿಕಿತ್ಸೆ ನೀಡಲು ನಾವು ಯಾವುದೇ ರೀತಿಯ ಅಡೆತಡೆ ಮಾಡಲಿಲ್ಲ ಎಂದು ಸಮರ್ಥನೆ ನೀಡಿದರು.. ಡಾ.ಅಜೀಂ ಮಯೂದ್ದೀನ್ ಮಾತನಾಡಿ, ತಜ್ಞ ವೈದ್ಯರು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿ ಸಮರ್ಪಕ ನಿರ್ವಹಣೆಯ ಜೊತೆಗೆ ಆಸ್ಪತ್ರೆಯ 170 ಹಾಸಿಗೆಗಳು, 6 ತೀವ್ರ ನಿಗಾ ಘಟಕದ ಹಾಸಿಗೆಗಳನ್ನು ಕೋವಿಡ್-19ಗೆ ಮೀಸಲಿಡಲಾಗಿದೆ. ವೈರಸ್ ಪತ್ತೆ ಹಚ್ಚುವ ಪ್ರಯೋಗಾಲಯದ ಕೆಲಸ ತೀವ್ರಗತಿಯಲ್ಲಿ ನಿರ್ವಹಿಸಲು ಆಟೋಮೆಟಿಕ್ ಆರ್.ಎನ್.ಎ ಎಕ್ಸಾಟ್ರಕ್ಟರ್ ಹಾಗೂ ಟ್ರುನಾಟ್ ಉಪಕರಣ ಅಲ್ಪಾವಧಿಯಲ್ಲಿ ಹೊಂದಿಸಲಾಗುತ್ತಿದೆ ಎಂದು ವಿವರಿಸಿದರು.

ಈ ವೇಳೆ ಪ್ರೊ.ಡಾ.ಪ್ರಸನ್ನ ಕಾಮತ್, ಕೊರೊನಾ ನೋಡಲ್ ಅಧಿಕಾರಿ ಡಾ.ಸುನಿಲ್ ಉಪಸ್ಥಿತರಿದ್ದರು.



**ಕೋಲಾರ ನಗರದ ಆರ್.ಎಲ್.ಜಾಲಪ್ಪ ಆಸ್ಪತ್ರೆ ವೈಸ್ ಚೇರ್ಮನ್ ಡಾ.ಜಿ.ಪ್ರದೀಪ್ ಕುಮಾರ್, ಇತರರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.**

ಸಂಯುಕ್ತ ಕರ್ನಾಟಕ



# ಜಾಲಪ್ಪ ಆಸ್ಪತ್ರೆಯಿಂದ ಚಿಕಿತ್ಸಾಲೋಪ ಆಗಿಲ್ಲ



ಸಂ.ಕ ಸಮಾಚಾರ, ಕೋಲಾರ

ಜಾಲಪ್ಪ 4 ತಿಂಗಳಿಂದ ಕೊರೋನಾಪೀಡಿತ 153 ಮಂದಿಗೆ ಚಿಕಿತ್ಸೆ ನೀಡಿದೆ. 119 ಸಕ್ರಿಯ ಪ್ರಕರಣಗಳಲ್ಲಿ 17 ಮಂದಿಯನ್ನು ಬಿಡುಗಡೆ ಮಾಡಿದೆ ಎಂದು ಅರಸು ವೈದ್ಯಕೀಯ ವಿ.ಇ ಡೀನ್ ಡಾ.ಪ್ರದೀಪ್ ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಆಸ್ಪತ್ರೆಗೆ ದಾಖಲಾಗಿದ್ದ 10 ಮಂದಿ ಸಾವನ್ನಪ್ಪಿದ್ದಾರೆ. ಈ ಪೈಕಿ ಮೂವರನ್ನು ಸತ್ತ ನಂತರ ತರಲಾಗಿತ್ತು. ಇಬ್ಬರು ದಾಖಲಾದ ಒಂದು ಗಂಟೆಯಲ್ಲೇ ಮೃತರಾದರು. ಉಳಿದ 5 ಮಂದಿ ಮಾತ್ರ ಇತರೆ ರೋಗಗಳಿಂದ ಬಳಲುತ್ತಿದ್ದು ಗುಣಮುಖರಾಗುವ ಸಾಧ್ಯತೆ ಕಡಿಮೆ ಇತ್ತು ಎಂದು ವಿವರಿಸಿದರು. ಕೋವಿಡ್-19 ವಿರುದ್ಧ ಯುದ್ಧದ ಮಾದರಿಯಲ್ಲಿ ನಮ್ಮ ಆಸ್ಪತ್ರೆ ಸಿಬ್ಬಂದಿ ದಿನದ 24 ಗಂಟೆಯೂ ಕರ್ತವ್ಯ ನಿರ್ವಹಿಸಿದ್ದು ಯಾವುದೇ ಉದಾಸೀನಕ್ಕೆ ಅವಕಾಶ ಇಲ್ಲ ಎಂದು ಸಮರ್ಥನೆ ನೀಡಿದರು. ಕೆಲವರು ವಾಸ್ತವಾಂಶ ಅರಿಯದೆ ಆರೋಪ ಮಾಡುತ್ತಿದ್ದು ಎಲ್ಲವನ್ನೂ ಜಿಲ್ಲಾಡಳಿತದ ಗಮನಕ್ಕೆ ತಂದಿದೆ ಎಂದು ತಿಳಿಸಿದರು.

ಆಸ್ಪತ್ರೆ ಅಧೀಕ್ಷಕ ಡಾ.ಅಜೀಂ ಮೊಯ್ದೀನ್, ಪ್ರೊ. ಎಂ.ಡಿ.ಪ್ರಸನ್ನಕಾಮತ್, ಡಾ.ಸುನಿಲ್ ಕುಮಾರ್ ಉಪಸ್ಥಿತರಿದ್ದರು.

U L R C
SDU ER

# ಸಮರೋಪಾದಿಯಲ್ಲಿ ಕಾರ್ಯ ನಿರ್ವಹಣೆ

ಕೋಲಾರ: 'ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಕಳೆದ 4 ತಿಂಗಳಿಂದ ಚಿಕಿತ್ಸೆ ನೀಡುತ್ತಿದ್ದೇವೆ' ಎಂದು ಆರ್.ಎಲ್ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉಪ ಕುಲಪತಿ ಡಾ.ಪ್ರದೀಪ್‌ಕುಮಾರ್ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿಯು ಕೋವಿಡ್- ವಿರುದ್ಧ ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ವೇಳೆ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿಗೂ ಸೋಂಕು ತಗುಲಿದೆ' ಎಂದರು.

'ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿಯು ಜೀವದ ಹಂಗು ತೊರೆದು ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಆದರೆ, ಕೆಲವರು ಆಸ್ಪತ್ರೆ ವಿರುದ್ಧ ವಿನಾಕಾರಣ ಟೀಕೆ ಮಾಡುತ್ತಿದ್ದಾರೆ. ಆಸ್ಪತ್ರೆಯು ರಾಜ್ಯದ ಗಡಿ ಭಾಗದಲ್ಲಿದ್ದು, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಬೆಡ್ ಸಿಗದ ಕಾರಣ ಅಲ್ಲಿನ ಸೋಂಕಿತರು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬರುತ್ತಿದ್ದಾರೆ' ಎಂದು ವಿವರಿಸಿದರು.

'ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಕ್ವಾರಂಟೈನ್ ಮಾಡಲು ಆಸ್ಪತ್ರೆಯಲ್ಲಿ ಸ್ಥಳಾವಕಾಶವಿಲ್ಲ. ಹೀಗಾಗಿ ಅವರನ್ನು ಬೇರೆ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ. ಆದರೆ, ಈ ಬಗ್ಗೆ ಜನರಿಗೆ ತಪ್ಪು ಸಂದೇಶ ರವಾನೆಯಾಗಿದೆ. ನಾವು ಸೊಂಕಿತರಿಗೆ ಚಿಕಿತ್ಸೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ' ಎಂದು ಸ್ಪಷ್ಟಪಡಿಸಿದರು.

ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಎಸ್.ಎಂ.ಅಜೀಂ ಮೋಹಿಯುದ್ದೀನ್, ವೈದ್ಯರಾದ ಡಾ.ಎಂ.ಡಿ.ಪ್ರಸನ್ನಕುಮಾರ್, ಡಾ. ಸುನೀಲ್ ಕುಮಾರ್ ಹಾಜರಿದ್ದರು.

ಕನ್ನಡಪ್ರಭ



## ವಿಶೇಷ ತಜ್ಞ ವೈದ್ಯರು ಇದ್ದಾರೆ | ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ: ಡಾ. ಪ್ರದೀಪ್ ಕುಮಾರ್

# ತಪ್ಪು ಗ್ರಹಿಕೆ ತರವಲ್ಲ, ಮೊದಲು ಸತ್ಯಾಂಶ ಅರಿಯಿರಿ

• **ಕನ್ನಡಪ್ರಭ ವಾರ್ತೆ** ಕೋಲಾರ

ನಗರದ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ 4 ತಿಂಗಳಿಂದ ಕೋವಿಡ್‌ಗೆ ಚಿಕಿತ್ಸೆ ನೀಡುತ್ತಿದ್ದು, ಈಚರೆಗೆ 476 ಮಂದಿ ಆಸ್ಪತ್ರೆಗೆ ದಾಖಲು ಮಾಡಿಕೊಂಡಿದೆ. ಈ ಪೈಕಿ 153 ಮಂದಿಗೆ ಪಾಸಿಟಿವ್ ಬಂದಿದೆ. 119 ಮಂದಿಯಲ್ಲಿ ಸಕ್ರಿಯ ಪ್ರಕರಣಗಳೆಂದು ಗುರುತಿಸಲಾಗಿದೆ. 17 ಮಂದಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದೆ ಎಂದು ಆರ್.ಎಲ್. ಆಸ್ಪತ್ರೆಯ ಉಪಕುಲಪತಿ ಡಾ. ಪ್ರದೀಪ್ ಕುಮಾರ್ ಹೇಳಿದರು.



ಆರ್.ಎಲ್. ಜಾಲಪ್ಪ ಆಸ್ಪತ್ರೆಯ ಸಭಾಂಗಣದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೀವರ್ ಕ್ಲಿನಿಕ್ ವಿಧಾನದಲ್ಲಿ ಸುಮಾರು 8 ಸಾವಿರ 300 ಮಂದಿ ರೋಗಿಗಳಿಗೆ ವ್ಯವಸ್ಥಿತ ನಿರ್ವಹಣೆಗಳನ್ನು ಅನುಸಲಸುವ ಮೂಲಕ 82 ಜನರಲ್ಲಿ ಪ್ರಕರಣ ಗುರುತಿಸಲಾಗಿದೆ ಎಂದರು.

ಆಸ್ಪತೆಯ ದಾಖಲಾಗಿದ್ದ 10 ಮಂದಿ ರೋಗಿಗಳು ಸಾವನ್ನಪ್ಪಿದ್ದಾರೆ. ಈ ಪೈಕಿ ಮೂವರು ಸತ್ತ ನಂತರ ಆಸ್ಪತ್ರೆಗೆ ತರಲಾಗಿತ್ತು. ಇಬ್ಬರು ಆಸ್ಪತ್ರೆಗೆ ದಾಖಲಾದ ಒಂದು ಗಂಟೆಯಲ್ಲೇ ಮೃತರಾದರು. ಉಳಿದ 5 ಮಂದಿ ಮಾತ್ರ ಅತೀ ರೋಗದ ಲಕ್ಷಣ ಮತ್ತು ಇತರೆ ರೋಗಗಳಿಂದ ಬಳಲುತ್ತಿದ್ದದ್ದು, ಗುಣಮುಖರಾಗುವ ಸಾಧ್ಯತೆ ಕಡಿಮೆ ಇದ್ದರೂ ಸಹ ಹೊಸ ವಿಧಾನ ಅನುಸರಿಸಿಯೂ ಇವರ ಜೀವ ಉಳಿಸಲಾಗಲಿಲ್ಲ ಎಂದರು.

ಆರ್.ಎಲ್. ಆಸ್ಪತ್ರೆಯಲ್ಲಿ ಉತ್ತಮ ತಜ್ಞರಿದ್ದಾರೆ. ಎಸ್‌ಎನ್‌ಆರ್ ಸೇರಿದಂತೆ ಹಲವು ವೈದ್ಯರಿಗೆ, ಪ್ಯಾರಮೆಡಿಕಲ್ ಸೇರಿದಂತೆ ಪೊಲೀಸ್, ಅಧಿಕಾರಿಗಳಿಗೆ ಕೋವಿಡ್ ಬಗ್ಗೆ ಅರಿವು ಮೂಡಿಸುವ ತರಬೇತಿ ನೀಡಲಾಗಿದೆ. ರೋಗವನ್ನು ತ್ವರಿತವಾಗಿ ಪರೀಕ್ಷೆ ಮಾಡುವ ಸಲುವಾಗಿ ಆಧುನಿಕ ಉಪಕರಣಗಳಿಗೆ 32 ಲಕ್ಷ ರು. ಬಂಡಾವಳ ಹೊಡಿದೆ. ಇದರಿಂದ ಪ್ರತಿದಿನ 200 ಪರೀಕ್ಷೆ ಮಾಡುವ ಬದಲಾಗಿ 400 ರಿಂದ 500 ಮಂದಿಗೆ ಪರೀಕ್ಷೆ ಮಾಡಬಹುದಾಗಿದೆ ಎಂದರು.

ಈ ಆಸ್ಪತ್ರೆ ರಾಜ್ಯದ ಗಡಿ ಭಾಗದಲ್ಲಿದ್ದು, ಆಂಧ್ರ ಪ್ರದೇಶ, ತಮಿಳುನಾಡು ಸೇರಿದಂತೆ ಬೆಂಗಳೂರಿನಲ್ಲಿ ಬೆಡ್‌ಗಳು ಸಿಗದೆ ಈ ಆಸ್ಪತ್ರೆಗೆ ಅಗಮಿಸಿ ದಾಖಲಾಗುತ್ತಿದ್ದಾರೆ. ಕೊನೆ ಹಂತದಲ್ಲಿ ರೋಗಿಗಳನ್ನು ಕರೆ ತರುತ್ತಿರುವುದರಿಂದ ಯಾರನ್ನು ತಿರಸ್ಕರಿಸದೆ ದಾಖಲು ಮಾಡಿಕೊಳ್ಳುತ್ತಿದ್ದು, ರೋಗಿಗಳ ಸಾವಿನ ಸಂಖ್ಯೆ ಇತರೆ ಆಸ್ಪತ್ರೆಗಿಂತ ನಮ್ಮಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಆದರೆ, ಈ ಬಗ್ಗೆ ವಾಸ್ತಾವಂಶ ಅರಿಯದೆ ತಪ್ಪಾಗಿ ಗ್ರಹಿಸಲಾಗುತ್ತಿರುವುದು ಸರಿಯಲ್ಲ ಎಂದರು.

ಆಸ್ಪತ್ರೆಯ ಅಧೀಕ್ಷಕ ಡಾ. ಅಜೀಮ್ ಮೋಯ್ದೀನ್ ಮಾತನಾಡಿ, ರೋಗಿಗೆ ತಪಾಸಣೆ ಮಾಡಲು 4, 5 ಸಾವಿರ ರು. ಇದೆ. ಸರ್ಕಾರಿ ಆಸ್ಪತ್ರೆಯಿಂದ ರೆಫರ್ ಪಡೆದು ಬಂದಲ್ಲಿ 2,5 ಸಾವಿರ ರು., ವೆಂಟಿಲೇಟರ್ 8 ಸಾವಿರ ರು., ಐಸಿಯು ಬೆಡ್ ಆದಲ್ಲಿ 4 ಸಾವಿರ ರು. ಸಾಮಾನ್ಯ ವಾರ್ಡ್‌ನ ಬೆಡ್ ಅದರೆ ಮೂರು ದಿನಕ್ಕೆ 2.5 ಸಾವಿರ ರು. ಶುಲ್ಕ ವಿಧಿಸಲಾಗುವುದು. ಇದರಲ್ಲೂ ಕೆಲವು ಯೋಜನೆಗಳಲ್ಲಿ ಹಾಗೂ ಇತರೆಗಳಿಂದ ರಿಯಾಯ್ತಿ ಸಿಗಲಿದೆ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರೊ. ಎಂ.ಡಿ.ಪ್ರಸನ್ನ ಕಾಮಾತ್, ಡಾ. ಸುನೀಲ್ ಕುಮಾರ್ ಉಪಸ್ಥಿತರಿದ್ದರು.